ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಡಿಕ್ಲರೇಷನ್ ಕೊಟ್ಟಿದ್ದರೂ ಸಹ ಲೆವಿ ಕಾನೂನು ಪ್ರಕಾರ ಲೆವಿ ಕೊಡುವುದು ಮಾಫಿ ಮಾಡುವ ನೀತಿ ಇದ್ದರೂ ಸಹ ತಹಸೀಲ್ದಾರರು ಡಿವಿಜನಲ್ ಕಮಿಷನರು ನನ್ನ ಂಬಳವನ್ನು ನಿಲ್ಲಿಸಿಬಿಡುತ್ತಾರೆ ಅಂತ ಹೇಳಿ ಒತ್ತಾಯದಿಂದ, ಮನೆಯಿಂದ ಬತ್ತವನ್ನು ಗಾಡಿಯಲ್ಲಿ ತೆಗೆದುಕೊಂಡು ಬಂದು ಮಿಲ್ ಮಾಡುವುದಕ್ಕೆ ತಂದಂತಹ ಬಡ ರೈತರ ಬತ್ತವನ್ನು ಸೀಸ್ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ವಿಠಲದಾಸಶೆಟ್ಟಿ.—ಈ ತನಕ ಅಂಥಾದ್ದು ಸರ್ಕಾರದ ಗಮನಕ್ಕೆ ಬರಲಿಲ್ಲ. ಸಿರಸಿ ತಾಲ್ಲೂಕಿನಲ್ಲಿ ಲೆವಿ ಕೇಸು ಇಷ್ಟರತನಕ ಯಾವ ಪೋಲೀಸ್ ಕಂಪ್ಲೇಂಟೂ ಮಾಡಿಲ್ಲ ಸಿದ್ದಾಪುರ ತಾಲ್ಲೂಕಿನಲ್ಲಿ 52 ಕೇಸುಗಳು ಪೋಲೀಸ್ ಎನ್‌ಕ್ವೈರಿಗೆ ಕೊಟ್ಟಿದೆ, ಬಲಾತ್ಕಾರವಾಗಿ ಅಥವಾ ಅಕ್ರಮವಾಗಿ ಮಾಡಿದ್ದು ತಾವು ದಯವಿಟ್ಟು ತಿಳಿಸಿದರೆ ಅದರ ಅಗತ್ಯವಾದ ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸಿದ್ದಾಪುರ ತಾಲ್ಲೂಕಿನ ಪೆಕ್ಯೂಲಿಯಾರಿಟಿ ಏನೆಂದರೆ ಬಂಡವಾಳಸ್ಥರು ಮತ್ತು ದೊಡ್ಡ ಜಮೀನ್ದಾರರಾಗಿರತಕ್ಕ ಹವ್ಯಕ್ಸ್ ಕಮ್ಯೂನಿಟಿ ಏನಿದೆ ಅವರು ಕಾಂಗ್ರೆಸ್‌ನವರಿಗೆ ಸಪೋರ್ಟ್ ಮಾಡಿದರು ಅಂತ ಅವರಮೇಲೆ ಒಂದು ಕೇಸನ್ನೂ ಹಾಕುತ್ತಿಲ್ಲ, ಬಡವರಾಗಿರತಕ್ಕ, ನಿರ್ಗತಿಕರು, ಕೂಲಿಗಾರರಾಗಿರತಕ್ಕ ತುಂಡು ಜಮೀನು ಇರತಕ್ಕ ನಾಮಧಾರಿ ಜಾತಿಗೆ ಸೇರಿದ ರೈತರಮೇಲೆ ವಿಶೇಷವಾಗಿ ಕೇಸುಗಳನ್ನು ಹಾಕಿ ಈ ರೀತಿ ತಾರತಮ್ಯ ಮಾಡಲಾಗಿದೆ. ಇವರು ಕಾಂಗ್ರೆಸಿಗೆ ಓಟು ಕೊಟ್ಟಿಲ್ಲ, ಪಿ. ಎಸ್. ಪಿ.ಗೆ ಓಟು ಕೊಟ್ಟಿದ್ದಾರೆ ಅಂತ ಕೇಸು ಹಾಕುವುದು ಇದು ನಿಜವಾದ ವಿಷಯ. ಇದಕ್ಕೆ ಅವಕಾಶ ಕೊಡದೆ ತಕ್ಕ ಬಂದೋಬಸ್ತು ಮಾಡುತ್ತೀರಾ ?

ಶ್ರೀ ಬಿ. ವಿಠಲದಾಸ ಶೆಟ್ಟಿ.—ಅಂತಹ ಪರಿಸ್ಥಿತಿ ಆದದ್ದು ಸರ್ಕಾರದ ಗಮನಕ್ಕೆ ಬರಲಿಲ್ಲ. ಒಂದು ಎಕರೆಗಿಂತ ಕಡಿಮೆ ಜಮೀನು ಯಾರಿಗೆ ಇದೆ ತಾವು ಹೇಳುವ ಪ್ರಕಾರ ಬಡವರು ಯಾರಿದ್ದಾರೆ ಅಂತಹವರನ್ನು ಕಂಪ್ಲೀಟಾಗಿ 1981ಜನ ಗ್ರೊಯರ್ಸ್‌ನ್ನು ಸಿರಸಿಯಲ್ಲಿ ಬಿಟ್ಟಿದ್ದೇವೆ, 1428 ಗ್ರೊಯರ್ಸ್‌ನ್ನು ಸಿದ್ದಾಪುರದಲ್ಲಿ ಬಿಟ್ಟಿದ್ದೇವೆ. ಉಳಿದವರಿಗೆ ಡಿಕ್ಲರೇಷನ್ ಮಾಡಿದ್ದು ಏನುಂಟೋ ಅದನ್ನು ಬಿಟ್ಟು ಉಳಿಕೆಯಾದುದನ್ನು ತೆಗೆದುಕೊಂಡಿದ್ದೇವೆ. ಏನಾದರೂ ತೊಂದರೆಯಾಗಿದ್ದರೆ ದಯವಿಟ್ಟು ತಿಳಿಸಿದರೆ ಅಗತ್ಯವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

Repairs to Tank in Veeranayakanahalli in Gulur Hobli

69. Sri GANGA BOVI (Gulur).—

Will the Minister of State for Minor Irrigation be pleased to state :—

(*a*) the extent of atchkat coming under the tank belonging to Veeranayakanahalli village in Gulur Hobli, Tumkur Taluk ;

(*b*) when the said tank breached ;

(*c*) the reasons for not yet sanctioning the work of the said tank even though it has come to the notice of Government ;

(*d*) whether there is any idea of getting the said tank repaired and thus help the ryot-achkatdars under the said tank ?

Smt. BASAVARAJESWARI (Deputy Minister for Social Welfare) [On behalf of SRI A. J. DODDAMETI (Minister of State for Minor Irrigation)].—

(*a*) 93 acres 15 guntas.

(SMT. BASAVARAJESWARI)

(*b*) About 8 years.

(*c*) Since the tank bund, etc., are in a very bad condition, the said tank has to be fully restored and as such survey was conducted and estimate prepared. After consideration it was found that it is too costly and hence it could not be taken up.

(*d*) The matter will be considered.

ಶ್ರೀ ಗಂಗಾಬೋವಿ.—ಎಲ್ಲೆಲ್ಲ ಹತ್ತು ಎಕರೆ ಜಮೀನು ನೀರಾವರಿ ಆಗುತ್ತದೆಯೋ ಅಲ್ಲಿ ಒಂದು ಕೆರೆಯನ್ನು ಕಟ್ಟಬೇಕೆಂಬುದು ಸರ್ಕಾರದವರ ನೀತಿಯಾಗಿರುವಾಗ ಇಲ್ಲಿ 92 ಚಿಲ್ಲರೆ ಎಕರೆ ತರಿಯಾಗುವಂತಿದ್ದರೂ ಏಕೆ ಇನ್ನೂ ಕೆರೆಯನ್ನು ದುರಸ್ತಿ ಮಾಡಲಿಲ್ಲಾ ?

† ಶ್ರೀಮತಿ ಬಸವರಾಜೇಶ್ವರಿ.—ಅದರ ಎಷ್ಟಿಮೇಟು ಈಗಾಗಲೇ ಆಗಿದೆ. ಅದು ಸರ್ಕಾರದವರ ಪರಿಶೀಲನೆಯಲ್ಲಿದೆ.

ಶ್ರೀ ಗಂಗಾಬೋವಿ.—ಹಾಗಾದರೆ ಅದನ್ನು ಇನ್ನೆಷ್ಟು ದಿನಗಳಲ್ಲಿ ಕೈಗೊಳ್ಳುತ್ತೀರಿ ?

ಶ್ರೀಮತಿ ಬಸವರಾಜೇಶ್ವರಿ.—ಈ ಹಿಂದೆ ಆಗಲೇ ಒಂದಾವರ್ತಿ ತಾರೀಖು 2-2-1969ರಲ್ಲಿ ಆ ಸ್ಥಳವನ್ನು ಎಗ್ಜಿಕ್ಯುಟೀವ್ ಇಂಜಿನಿಯರ್ ವಿಜಿಟ್ ಮಾಡಿ ಅದರ ಬಗ್ಗೆ ಒಂದು ಎಷ್ಟಿಮೇಟನ್ನು ಒಂದು ಲಕ್ಷದ ನಾಲ್ಕು ಸಾವಿರಕ್ಕೆ ತಯಾರು ಮಾಡಿದ್ದರು. ಆದರೆ ಅದು ಬಹಳ ಹಾಸ್ತಿಯಾಯಿತು, ಎಕರೆ ಒಂದಕ್ಕೆ 1,118 ರೂಪಾಯಿಗಳ ಖರ್ಚು ಬೀಳುತ್ತದೆ. ಅಷ್ಟು ಬದ್ದರೆ ಲಾಭದಾಯಕ ಆಗುವುದಿಲ್ಲ ಎಂದು ಅದನ್ನು ಮತ್ತೆ ಎಕರೆಗೆ ಒಂದು ಸಾವಿರಕ್ಕಿಂತ ಹಾಸ್ತಿಯಾಗದಂತೆ ಒಂದು ಅಂದಾಜನ್ನು ತಯಾರಿಸುವಂತೆ ಎಗ್ಜಿಕ್ಯುಟೀವ್ ಇಂಜಿನಿಯರಿಗೆ ತಿಳಿಸಲಾಗಿತ್ತು. ಅವರು ಅದನ್ನು ಈಗಾಗಲೇ ತಯಾರಿಸಿ ಸ್ಕ್ರುಟಿನಿಗಾಗಿ ಸೂಪರಿಂಟೆಂಡೆಂಟ್‌ರಿಗೆ ಕಳುಹಿಸಿದ್ದಾರೆ. ಅದು ಬಂದ ಕೂಡಲೇ ಕೆಲಸ ಕೈಗೊಳ್ಳುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ.—ಅಲ್ಲಿ ಕೆರೆ ಒಡೆದು 8 ವರ್ಷಗಳ ಮೇಲಾಗಿದೆ. ಆದರೆ ಅಲ್ಲಿ ರೈತರಿಂದ ತರೀ ಕಂದಾಯವನ್ನು ವಸೂಲ್ಮಾಡಿದ್ದರೆ ಅದನ್ನು ಕ್ಯಾನ್ಸಲ್ ಮಾಡುವುದಕ್ಕೆ ಆಜ್ಞೆ ಮಾಡುತ್ತೀರಾ ?

ಶ್ರೀಮತಿ ಬಸವರಾಜೇಶ್ವರಿ.—ಅದನ್ನು ಪರಿಶೀಲಿಸಲಾಗುತ್ತದೆ. ಈ ವಿಚಾರ ಗೊತ್ತಿರಲಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸರ್ಕಾರದವರ ಧೋರಣೆಯ ಪ್ರಕಾರ ಕೆಲಸಗಳು ಬಹಳ ನಿಧಾನವಾಗುತ್ತಿರುವುದರಿಂದ ಹೀಗೆ ಅಂದಾಜುಗಳನ್ನು ರಿವೈಜ್ ಮಾಡಬೇಕಾಗಿದೆ ಖರ್ಚು ಹಾಸ್ತಿಯಾಗುತ್ತಿದೆ ಎಂಬುದು ಸರ್ಕಾರದವರಿಗೆ ಮನವರಿಕೆ ಆಗಿದೆಯೇ ?

ಶ್ರೀಮತಿ ಬಸವರಾಜೇಶ್ವರಿ.—ಅದರ ಹಳೆಯ ವೇಸ್ಟ್‌ವಿಯರಿಗೆ ಅಲ್ಲಿ ಬರತಕ್ಕ ಫ್ಲಡ್ಡನ್ನು ತಡೆಯತಕ್ಕ ಶಕ್ತಿ ಇರಲಿಲ್ಲ. ಆದ್ದರಿಂದ ಅದನ್ನು ಈಗ ದೊಡ್ಡದನ್ನಾಗಿ ಮಾಡಬೇಕಾಗಿದೆ. ಅದೀಗ ಸರ್ಕಾರದವರ ಪರಿಶೀಲನೆಯಲ್ಲಿದೆ.

Committee constituted to recommend the release of cultivable forest lands in North Kanara District for Cultivation

114. Sri M. H. JAYAPRAKASH NARAYAN (Sirsi).—

Will the Minister of State for Forests be pleased to state :—

(*a*) whether it is a fact that they have issued a Government Order recently releasing an extent of one lakh acres of forest land in North Kanara District for cultivation ;